ಅವ್ವನನ್ನು ಕಾದು ಕಾದು ನಿದ್ದೆಗೆ ಜಾರಿದೆ. ಸುಸ್ತು. ಮಧ್ಯಾಹ್ನ ಉಂಡ ಶಾಲೆಯ ಅನ್ನ ಎಂದೋ ಕರಗಿ ಹೋಗಿದೆ. ಅವ್ವ ಬರದೆ ಮನೆಯಲ್ಲಿ ದೀಪ ಹತ್ತುವುದಿಲ್ಲ. ಅವನಿಗೆ ಅವ್ವ ಮತ್ತು ದೀಪದ ನಡುವೆ ಯಾವುದೇ ವ್ಯತ್ಯಾಸಗಳಿಲ್ಲ..

ಅಲ್ಲೆಲ್ಲೊ ನಗರದ ಯಾವುದೊ ಬೀದಿಯಲ್ಲಿ ಮಗು ಬಸ್ಸಿನಿಂದ ಇಳಿಯುವ ಮೊದಲು ತಾಯಿ ಕಾದು ನಿಂತಿದ್ದಾಳೆ. ಹಳದಿ ಬಸ್ಸು ದೂಳು ಎಬ್ಬಿಸಿಕೊಂಡು ಬರುತ್ತದೆ. ಅದರಿಂದ ಮಗ ಇಳಿಯುತ್ತಾನೆ. ತಾಯಿಯೇ ಮಗುವಿನ ಶಾಲೆಯ ಬ್ಯಾಗು ಹೊರುತ್ತಾಳೆ. ಬಿಸಿಬಿಸಿಯಾದ ರವೆ ಇಡ್ಲಿ ಮಾಡಿಕೊಟ್ಟಿದ್ದಾಳೆ. ಅವನು ಅದನ್ನು ತಿಂದು ಸಂಗೀತ ಕ್ಲಾಸಿಗೆ ಹೊರಡಬೇಕು. ಅದನ್ನು ಮುಗಿಸಿಕೊಂಡು ಅಲ್ಲಿಂದಲೇ ಟ್ಯೂಷನ್‌ಗೆ... ಜಗತ್ತು ಸಂಜೆ ಹೊತ್ತಿಗೆ ಮೈ ನಿರಾಳ ಬಿಟ್ಟು ದಣಿವು ಕಳೆದುಕೊಳ್ಳುತ್ತಿದ್ದರೆ, ಈ ಹುಡುಗರು ಸಂಜೆ ಎದೆ ಸೀಳಿ ನಡೆಯುತ್ತಾರೆ. ಕಲಿಯುತ್ತಾರೆ. ನೀನು ಕಲಿತರೆ ಮಾತ್ರ ನಾಳೆ ಇಂತದ್ದೆ ನಗರದಲ್ಲಿ ನೀನೂ ದೊಡ್ಡ ಮನೆಯಲ್ಲಿ ಇರಬಹುದು. ನಿನ್ನ ಹೆಂಡತಿಯೂ ನಿನ್ನ ಮಗುವನ್ನು ಹಳದಿ ಬಸ್ಸಿನಿಂದ ಇಳಿಸಿಕೊಳ್ಳಬಹುದು. ಅದೇ ನಿಜವಾದ ಸಂಜೆ ಅನ್ನುವುದನ್ನು ಅವರಿಗೆ ಹೇಳಿಕೊಡಲಾಗಿದೆ, ಹಾಗೆ ನಂಬಿಸಲಾಗಿದೆ..

ರಸ್ತೆ ಬದಿಯಲ್ಲಿ ಡೇರೆ ಹಾಕಿದ ವಲಸೆ ಮಕ್ಕಳು ಸೌದೆಗಳನ್ನು ಆಯ್ದು ಒಟ್ಟಿದ್ದಾರೆ. ಇನ್ನು ಅವರ ರಾತ್ರಿಯ ಅಡುಗೆ ನಿರಾತಂಕ. ಮನೆ ಬಿಟ್ಟು ಬಂದು ಹೋಟೆಲ್ ಸೇರಿದ ಪೋರ ಸಂಜೆಯಾಗುತ್ತಲೇ ರಾತ್ರಿ ಮಲಗಲು ಬೇಕಾದ ಒಂದು ಗೋಣಿಚೀಲವನ್ನು ಬಚ್ಚಿಡುತ್ತಾನೆ. ಹಾಸ್ಟೆಲಿನಲ್ಲಿ ಓದಲು ಬಂದು ಸೇರಿಕೊಂಡ ಹೈದ ಕಂಬನಿ ತುಂಬಿಕೊಂಡು ರಸ್ತೆ ನೋಡುತ್ತಾನೆ. ಬರುತ್ತೇನೆ ಅಂದಿದ್ದ ಅಪ್ಪ ಇಂದೂ ಕೂಡ ಬರಲಿಲ್ಲ.

ಈ ಹುಡುಗನ ಅವ್ವ ಬಂದಿದ್ದಾಳೆ. ದೀಪ ಹಚ್ಚಿದ್ದಾಳೆ. ಎದ್ದು ಕೂರುತ್ತಾನೆ. ಕಳೆದುಕೊಂಡ ಹಗಲು ಅವ್ವ ಹಚ್ಚಿದ ದೀಪದಲ್ಲಿ ಅವನಿಗೆ ಮತ್ತೆ ಕಾಣಿಸುತ್ತಿದೆ. ಅವ್ವ ಚಹಾ ಕಾಯಿಸಲು ನೋಡುತ್ತಾಳೆ. ಸಕ್ಕರೆ ಡಬ್ಬ ಖಾಲಿ. ಕಡ ತರಬೇಕು. ಪಕ್ಕದ ಮನೆಯಿಂದ ಚೂರು ಕಡ ತಂದು ಚಹಾ ಕಾಯಿಸಲು ಒಲೆಯ ಮೇಲೆ ಪಾತ್ರೆ ಇಡುತ್ತಾಳೆ.

ಸಂಜೆಯ ಮಬ್ಬುಗತ್ತಲೆಗೆ ಜೀವ ಬರೋದೇ ಈ ಚಹಾ, ಕಾಫಿಗಳ ವಾಸನೆಯಿಂದ. ಜಗತ್ತು ಈ ಸಂಜೆಗಳಲ್ಲಿ ಯಾಕೆ ಚಹಾ ಹೀರುತ್ತಾ ಕೂರುತ್ತದೆ. ಹಗಲು ಉದುರಿ ಹೋದ ಖುಷಿಗೋ, ಕತ್ತಲು ಚಿಗುರುತ್ತಿರುವುದರ ಬೇಸರಕ್ಕೊ..?

ಅದೇ ಸಂಜೆ. ಅದೇ ಮಬ್ಬುಗತ್ತಲು. ಇಲ್ಲಿ ಸಕ್ಕರೆ ಕಡ ತಂದು ಮಾಡಿದ ಚಹಾ ಕರಿ ಬಣ್ಣ. ಅಲ್ಲೆಲ್ಲೊ ಮಹಲಿನಲ್ಲಿ ದುಬಾರಿ ಬೆಲೆಯ ಘಮಘಮದ ಕಾಫಿಗೆ ಅಚ್ಚ ಬಿಳಿ ಬಣ್ಣ. ಚಹಾ ಕೂಟದಲ್ಲೇ ಬಂಧ ಚಿಗುರುತ್ತವೆ. ಕಾಫಿ ಪಾರ್ಟಿಯಲ್ಲೂ ಬಂಧ ಮುರಿಯುತ್ತವೆ. ಎರಡನ್ನೂ ನೋಡುತ್ತಾ ಸಂಜೆ ಸುಮ್ಮನೆ ನಿಲ್ಲುತ್ತದೆ.

'ಈ ಬೈಗಿನಾಗೆ ಒಂದು ತೊಟ್ಟು ಚಹಾ... ಇಲ್ಲ ಅಂದ್ರೆ ಯಾಕಾದರೂ ದುಡಿಬೇಕು...' ಅಂತ ಅಪ್ಪ ಆಗಾಗ ಅವ್ವಗೆ ಗದುರುತ್ತಿದ್ದ. ಸಂಜೆಯ ಚಹಾ ಅದು ಬರೀ ಚಹಾ ಅಲ್ಲ. ಅದು ಸಮಾಧಾನ.

ಅವರ ಬೈಗು... ನನಗೆ ಸಂಜೆ.

ಎಲ್ಲಿ ಹಗಲು ಮುಗಿಯುತ್ತೆಂದು ಕೆಲವು ಹೋಟೆಲ್‌ಗಳು ಬಾಗಿಲು ಮುಚ್ಚುತ್ತವೋ... ಅದೇ ಬಿಂದುವಿನಲ್ಲಿ ಸಂಜೆ ಎಂಬುದು ರಸ್ತೆಯ ಬದಿಯಲ್ಲಿ ತಳ್ಳು ಗಾಡಿಯಲ್ಲಿ ಬದುಕು ತೆರೆಸುತ್ತದೆ. ಸಂಜೆ ಎಂಬುದು ಎಷ್ಟೋ ಜನರಿಗೆ ಬದುಕು. ಎಷ್ಟೋ ಜನರ ಪಾಲಿಗೆ ಒಂದು ಸಂಜೆ ಇಲ್ಲದೆ ಹೋಗಿದ್ದರೆ ಬದುಕೂ ಇರುತ್ತಿರಲಿಲ್ಲ.

ತಳ್ಳುಗಾಡಿಯ ಇಡ್ಲಿ... ಅದಕ್ಕೆ ಹಗಲಿನ ಬಿಳಿ ಇದೆ. ಸಂಜೆಯ ಹಸಿವಿಗೆ ಈ ಇಡ್ಲಿಗಳೇ ಸಾಂತ್ವನ. ಕರಿಯುವ ಮಿರ್ಚಿಯ ವಾಸನೆ... ಮಂಡಕ್ಕಿಯ ಘಮಲು, ಎಗ್ ರೈಸ್, ಕಬಾಬು, ಗೋಬಿ... ಪಾನಿಯೂ ಉಂಟು, ಪೂರಿಯೂ ಉಂಟು. ದುಡ್ಡು ಇದ್ದರೂ ಇಡೀ ದಿನ ತಿನ್ನಲಾಗದವರಿಗೆ, ಊಟ ಮಾಡುವಷ್ಟು ದುಡ್ಡು ಇಲ್ಲದವರಿಗೆ, ಬಾಯಿ ರುಚಿಯವರಿಗೆ. ಮನೆ ಇಲ್ಲದವರಿಗೆ, ಮನೆಯಲ್ಲಿ ಯಾರೂ ಇಲ್ಲದವರಿಗೆ.. ಕಡಿಮೆ ದುಡ್ಡಿದ್ದವರಿಗೆ.. ಈ ರಸ್ತೆ ಬದಿಯ ಅಂಗಡಿಗಳು ಸಾಂತ್ವನ.